SRI H. M. CHANNNABASAPPA.—The number of contracors may not be more than 44. I cannot straightaway say how many contractors have been working.

SRI B B. SAYANAK.—May I know how much amount is paid for diversion work and for construction of bridges?

SRI H. M. CHANNABASAPPA.—They are all matters which amount to break up in respect of each case. There are 44 works going on and it is not possible for me to give break up for each work. If the hon. member is particular, I will give details if he comes to my chamber.

SRI D. B. KALMANKAR.—May I know whether the construction of these works is given to only one contractor or there are more than one contractor.

SRI H. M. CHANNABASAPPA.—There is no question of giving all these works to one contractor. Tenders will be called for each work and contractors fixed on the basis of tender.

SRI B. B. SAYANAK.—What are the conditions stipulated for the contractors to complete these bridges?

SRI H. M. CAHNNABASAPPA.—They are incorporated in the tender notifiction.

SRI B. B. SAYANAK.—Has it come to the notice of the Government that these works must be completed before monsoon commences as otherwise there will be difficulty for the traffic?

SRI H. M. CHANNABASAPPA.—Due care will be taken to see that appropriate target date is fixed in respct of each work.

MADAM SPEAKER.—Question no. 415 is held over.

ALLOWANCES AND OTHER FACILITIES TO POLICE PERSONNEL

420. SRI K. R. SRINIVASULU NAYADU (Shanthinagar).—

Will the Chief Minister be pleased to state.—

(*a*) whether uniform allowances are given to the Sub-Inspectors and Reserve Police Inspectors ; if not the reasons therefor and to whom these allowances are given;

(*b*) whether it is not a fact that conveyance allowances are given to C. Is. and Sub-Inspectors of Civil Police whereas R. P.Is. (and R. S. Is. are not given; if so, the reason for the same :

(*c*) whether the Police personnel working on Sundays and Holidays are getting remuneration ; if not, the reason for the same ;

(SRI K. R. SRINIVASALU NAYADU)

(*d*) whether there is any proposal before the Government to increase to each police personnel at least 3 shirts, 2 hats, 2 pairs boots, 2 pairs Hosetops, 2 pairs pants of unifarm per year ;

(*e*) whether there is any proposal before the Government to provide to police personnel having a strength of 500 and above one Maternity Hospital with five beds and Midwife to all Police Head Quarters ;

(*f*) whether the Reserve police working for 24 hours under Civil police for Bandobust duties are not paid additional pay or special pay whereas some N. G. Os. though working only for 8 hours are getting Special pay ; if so, the resaons for this desparity?

SRI H.M. CHANANABASAPPA (Ministr for Public Works) [On behalf of

SRI D. DEVARAJ URS (Chief Minister)].—

(*a*) Payment of uniform/dress allowance to Police Officers of and below the rank of Police Inspectors and their counterparts in the Armed Police, has been discontinued with effect from 1-1-1970 as per Government order No. FD 15 SRP (1) 70 dated 9-2-1970.

Uniform grants are given to IPS Officers and Officers of State Police Service at the following rates.—

(1) IPS Officers-Initial grant of Rs. 1000-and renewal grant of Rs. 800 at an interval of 7 years.

(2) State Police Service Officers (*i.e.*, Non-IPS) of and above the rank of Deputy Superintendents of Police Intial grant of Rs. 600 and renewal grant of Rs. 400-once in 4 years.

(*b*) Circle Inspectors and Sub-Inspectors (Civil) are given conveyance allowance at Rs. 40 p. m. subject to the condition that they should maintain their own motor cycles and use them for official work. In case they maintain bicycles, they are paid conveyance allowance at Rs. 10 p. m. The above rates are admissible in cases of officers working within the Corporation or city limits where they will have large amount of travelling within 5 miles from head quarters, for which they will not be entitled to any T. A.

The Reserve Police Inspectors and Reserve Sub- Inspectors are not given any conveyance allowance as they do not fulfil the condition laid down for granting this allowance.

(*c*) The Police personnel are not given remuneration for working on Sundays and holidays as they are considered to be on duty always.

(*d*) Articles of clothing and equipment are supplied to the police personnel according to the prescribed scale. Recently the scale of supply of items of clothing and equipments to the H. Cs. and P. Cs. (Civil) in Bangalore City has been enhanced.

(*e*) No.

(*f*) Special pay is granted for specialiy arduous nature of duties or specific addition to work or responsibility Although police Officers are deemed to be always on duty, they are generally given 8 hours duty at a time. But the very nature of their duties is such, during emergencies, the police officers will be required to perform duties for longer periods, as and when the situation demands. Whenever they perform extra duties emergenices, they paid Rs. 2 per day as feeding charges.

ಶ್ರೀ ಕೆ ಆರ್. ಶ್ರೀನಿವಾಸುಲು ನಾಯ್ಡು.—ಸ್ವಾಮಿ, ನನ್ನ ಪ್ರಶ್ನೆಗೆ ತಾವು ಕೊಟ್ಟಿರುವ ಉತ್ತರದಲ್ಲಿ ೯ನೇ ಫೆಬ್ರುವರಿ ೧೯೭೦ನೇ ದಿನಾಂಕದ ಸರ್ಕಾರಿ ಆದೇಶದ ಮೇರೆಗೆ ೧ನೇ ಜನವರಿ ೧೯೭೦ನೇ ದಿನಾಂಕದಿಂದ ಪೋಲೀಸ್ ಇನ್‌ಸ್ಪೆಕ್ಟರ್ ಹಾಗೂ ಅವರಿಗಿಂತ ಕಡಿಮೆ ದರ್ಜೆಯ ಪೋಲೀಸ್ ಅಧಿಕಾರಿಗಳು ಮತ್ತು ಅವರಿಗೆ ತಕ್ಷಮಾನವಾದ ಹುದ್ದೆಗಳಲ್ಲಿನ ಸಶಸ್ತ್ರ ಪಡೆಯ ಅಧಿಕಾರಿಗಳಿಗೆ ಸಮವಸ್ತ್ರ ಉಡುಪಿನ ಭತ್ಯ ನೀಡುವುದನ್ನು ನಿಲ್ಲಿಸಲಾಗಿದೆ. ಐ.ಪಿ.ಎಸ್. ಅಧಿಕಾರಿಗಳಿಗೆ ಹಾಗೂ ರಾಜ್ಯದ ಪೋಲೀಸ್ ಸೇವಾ ವರ್ಗದವರಿಗೆ ಸಮವಸ್ತ್ರ ಉಡುಪಿನ ಭತ್ಯವನ್ನು ಕೆಳಕಂಡ ದರಗಳಲ್ಲಿ ನೀಡಲಾಗುತ್ತಿದೆ ಎಂದು ಹೇಳಿದ್ದಾರೆ. ಇದನ್ನು ಮೊದಲಿಂ ಕೊಟ್ಟ ಹಾಗೆ ಎಲ್ಲರಿಗೂ ಏತಕ್ಕೆ ಕೊಡಬಾರದು, ಪುನಃ ಇದನ್ನು ಕೊಡಲು ಸರ್ಕಾರದವರು ಪರಿಶೀಲನೆ ಮಾಡುತ್ತಾರೆಯೇ ?

†ಶ್ರೀ ಎಚ್. ಎಂ. ಚನ್ನಬಸಪ್ಪ.—ತುಕೋಳ ಪೇ ಕಮಿಷನ್ ವರದಿಯ ಪ್ರಕಾರ, ಅವರ ಶಿಫಾರಸ್ಸಿನ ಮೇಲೆ ಅದನ್ನೆಲ್ಲಾ ಪರಿಶೀಲನೆ ಮಾಡಿ ಎಲ್ಲೆಲ್ಲಿ ಲೋಪ ಇದೆ, ದೋಷ ಇದೆ ಎಂಬುದನ್ನೆಲ್ಲಾ ನೋಡಿ, ಅವರ ಶಿಫಾರಸ್ಸಿನಲ್ಲಿ ಏನಿದೆ ಎಂಬುದನ್ನೂ ನೋಡಿ ಎಲ್ಲಾ ಯೋಚನೆ ಮಾಡಿ ಆ ಬಗ್ಗೆ ತೀರ್ಮಾನ ತೆಗೆದುಕೊಳ್ಳುತ್ತೇವೆ.

ಶ್ರೀ ಎಂ. ಎಸ್. ಕೃಷ್ಣನ್.—ತುಕೋಳ್ ಪೇ ಕಮಿಷನ್ನಿನಲ್ಲಿ ಆ ಅಲೋಯನ್ಸ್ ಅನ್ನು ನಿಲ್ಲಿಸ ಬೇಕೂ ಎಂದು ಹೇಳಿಲ್ಲ, ಹೀಗಿರುವಾಗ ಅವರಿಗೆ ಮೊದಲು ಕೊಡುತಿದ್ದ ಅಲೋಯನ್ಸ್ ಅನ್ನು ಏತಕ್ಕೆ ನಿಲ್ಲಿಸಿದ್ದಾರೆ ?

SRI H. M. CHANNABASAPPA .—I would like to plead for notice on that.

ಶ್ರೀ ವಾಟಾಳ್ ನಾಗರಾಜ್.—ಪೋಲೀಸಿನವರಿಗೆ ಈಗಿರತಕ್ಕ ಡ್ರೆಸ್ಸನ್ನು ಬದಲಾವಣೆ ಮಾಡಿ ಬೇರೆ ಡ್ರೆಸ್ಸನ್ನು ಕೊಡಬೇಕೂ ಎಂದು ಈ ಹಿಂದೆ ಐ.ಜಿ.ಪಿ. ಆವರಾಗಿದ್ದ ಶ್ರೀ ಲೂಯೀಸ್ ಆವರು ಬೇರೆ ಒಂದು ಡ್ರೆಸ್ಸನ್ನು ಹೊಲಿಸಿ ಆದನ್ನು ಕೆಲವರಿಗೆ ಹಾಕಿ ಪ್ರಯೋಗ ಮಾಡಿದ್ದರು. ಆದ್ದರಿಂದ ಅವರಿಗೆ ಯಾವ ಯಾವ ಡ್ರೆಸ್ಸನ್ನು ಕೊಡಬೇಕು ಎಂದೂ ತೀರ್ಮಾನ ಮಾಡಿದ್ದಾರೆ ? ಡ್ರೆಸ್ ಭತ್ಯವನ್ನು ಕೊಡುವ ವಿಷಯದಲ್ಲಿ ಕೆಲವರಿಗೆ ಅನ್ಯಾಯವಾಗಿದೆ ಎಂದು ನಾನು ಕೇಳಿದ್ದೇನೆ. ಆದ್ದರಿಂದ ಪೋಲೀಸ್ ಇನ್‌ಸ್ಪೆಕ್ಟರ್, ಸಬ್-ಇನ್‌ಸ್ಪೆಕ್ಟರ್ ಮತ್ತು ಅವರಿಗಿಂತ ಕಡಿಮೆ ದರ್ಜೆಯ ಪೋಲೀಸು ಅಧಿಕಾರಿಗಳಿಗೆ ಡ್ರೆಸ್ ಭತ್ಯವನ್ನು ಕೊಡದೇ ಇರುವುದಕ್ಕೆ ಕಾರಣವೇನು ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅದಕ್ಕೆ ಬೇರೆ ಪ್ರಶ್ನೆಯನ್ನು ಕೇಳಿದರೆ ಉತ್ತರ ಕೊಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್.—ಹಿಂದೆ ಐ.ಜಿ.ಪಿ. ಆಗಿದ್ದಂತಹ ಶ್ರೀ ಲೂಯೀಸ್ ಆವರು ಪೋಲೀಸಿನವರಿಗೆ ಈಗಿರತಕ್ಕ ಪೇಟ ಮತ್ತು ಡ್ರೆಸ್‌ಗಳನ್ನು ಬದಲಾಯಿಸಿ ಬೇರೆ ಹೊಸ ಡ್ರೆಸ್‌ಗಳನ್ನು ಕೊಡ ಬೇಕೆಂದು ತೀರ್ಮಾನ ಮಾಡಿದ್ದರು. ಆ ಹೊಸ ಡ್ರೆಸ್ಸಿನ ರೂಪರೇಷೆಗಳು ಏನು ಎಂಬುದನ್ನು ಹೇಳುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಬೆಂಗಳೂರಿನಂತಹ ದೊಡ್ಡ ಪಟ್ಟಣಗಳಲ್ಲಿ ಕೆಲಸ ಮಾಡತಕ್ಕಂಥಾ ಪೋಲೀಸಿನವರು ಏನಿದ್ದಾರೆ ಅವರು ವಿಶೇಷ ರೀತಿಯ ಕೆಲಸವನ್ನು ಮಾಡಬೇಕಾಗುತ್ತದೆ. ಅಂಥವರ ಬಗ್ಗೆ ಯಾವ ರೀತಿ ಮಾಡಬೇಕೂ, ಯಾವ ಡ್ರೆಸ್ಸನ್ನು ಕೊಡಬೇಕೆಂಬ ಬಗ್ಗೆ ಇನ್ನೂ ಯೋಚನೆ ಮಾಡು ತ್ತಿದ್ದೇವೆ, ಅದು ಕಾರ್ಯರೂಪಕ್ಕೆ ಬಂದ ಮೇಲೆ ಅದನ್ನು ತಮಗೆ ತಿಳಿಸುತ್ತೇವೆ.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್.—ಪೋಲೀಸಿನವರಿಗೆ ಸಂಬಳ ಕೊಟ್ಟು ಆದರ ಜೊತೆಗೆ ಯಾವುದೇ ಒಂದು ಕೆಲಸ ಆಗಬೇಕಾದರೆ ಗಿಂಬಳ ಬೇರೆ ಇರುತ್ತದೆ. ಆದ್ದರಿಂದ ಅವರಿಗೆ ಒಂದು ಅಲೋಯನ್ಸ್ ಕೊಟ್ಟು ಗಿಂಬಳವನ್ನು ತಪ್ಪಿಸುತ್ತೀರಾ ?

ಅಧ್ಯಕ್ಷರು. — ತಾವು ಸರಿಯಾಗಿ ಪ್ರಶ್ನೆಯನ್ನು ಕೇಳಬೇಕು.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್.—ಆದರ ಅರ್ಥ ಬೇಕಾದರೆ ನಾನು ಹೇಳುತ್ತೇನೆ. ಗಿಂಬಳ ಎಂದರೆ ಹಳಗನ್ನಡದಲ್ಲಿ ಲಂಚ ಎಂದು ಅರ್ಥ. ಪೋಲೀಸ್ ಇಲಾಖೆಯಲ್ಲಿ ಲಂಚ ಕೊಡದಿದ್ದರೆ ಕೆಲಸಗಳು ಆಗುವುದಿಲ್ಲ, ಆದ್ದರಿಂದ ಅವರಿಗೆ ಬೇರೆ ಯಾವುದಾದರೂ ಒಂದು ಅಲೋಯನ್ಸ್ ಕೊಟ್ಟು ಅವರು ಲಂಚ ತೆಗೆದುಕೊಳ್ಳುವುದನ್ನು ತಪ್ಪಿಸುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅದಕ್ಕೆ ಬೇರೆ ಪ್ರಶ್ನೆ ಹಾಕಿದರೆ ಉತ್ತರ ಕೊಡುತ್ತೇನೆ.

ಶ್ರೀ ಕೋಣಂದೂರು ಲಿಂಗಪ್ಪ.—ಪೋಲೀಸ್ ಇಲಾಖೆಯವರು ೩೬೫ ದಿವಸಗಳೂ ೨೪ ಗಂಟೆ ಕೆಲಸ ಮಾಡುತ್ತಾರೆ. ಆದ್ದರಿಂದ ಬೇರೆ ಸರ್ಕಾರಿ ನೌಕರರಿಗೆ ಇರತಕ್ಕಂಥಾ ಸವಲತ್ತುಗಳನ್ನೂ ಇವರಿಗೆ ಕೊಡುವ ವ್ಯವಸ್ಥೆ ಮಾಡುತ್ತೀರಾ ? ಮತ್ತು ಈ ಪೋಲೀಸಿನವರು ಭಾನುವಾರ ಹಾಗೂ ರಜಾ ದಿನಗಳಲ್ಲಿ ಕೆಲಸ ಮಾಡುವುದರಿಂದ ಅವರಿಗೆ ಹೆಚ್ಚಿನ ಭತ್ಯವನ್ನು ಕೊಡುವುದಕ್ಕೆ ಪರಿಶೀಲನೆ ಮಾಡುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.— ಸಾರ್ವಜನಿಕ ಹಿತ ದೃಷ್ಟಿಯಿಂದ ಕೆಲವು ಸರ್ಕಾರಿ ಇಲಾಖೆಗಳಲ್ಲಿ ನೌಕರರು ೨೪ ಗಂಟೆಗಳೂ ಡ್ಯೂಟಿಯ ಮೇಲೆ ಇರಬೇಕಾಗುತ್ತದೆ. ಆ ಇಲಾಖೆಗಳಲ್ಲಿ ಇದು ಒಂದು ಇಲಾಖೆ.

SRI D. B. KALMANKAR.—May I know what are the conditions ?

ಶ್ರೀ ಎಚ್. ಎಂ. ಚನ್ನಬಸಪ್ಪ.—ನಿಯಮದ ಪ್ರಕಾರ ಅವರು ಯಾವ ಯಾವ ಕಾಲದಲ್ಲಿ ಯಾವ ಯಾವ ಕೆಲಸವನ್ನು ಮಾಡಬೇಕೆಂದು ಇದೆಯೋ ಆ ರೀತಿ ಅವರು ಕೆಲಸವನ್ನು ಮಾಡಬೇಕಾಗುತ್ತದೆ.

SRI M. S. KRISHNAN.—Will the Government consider that the work of these police personnel is more arduous than the other monthly rated employees and pay them extra if they work on Sundays and other holidays ?

SRI H. M. CHANNABASAPPA.—That is a suggestion for action.

ಶ್ರೀ ಕೆ. ಶ್ರೀರಾಮುಲು.—ಪೋಲೀಸಿನವರು ತುರ್ತು ಪರಿಸ್ಥಿತಿಯ ಸಮಯದಲ್ಲಿ ಹೆಚ್ಚಿನ ಕೆಲಸ ನಿರ್ವಹಿಸಿದಾಗ ಅವರಿಗೆ ಊಟದ ಪೆಚ್ಚಿಕ್ಕಾಗಿ ದಿನವೊಂದಕ್ಕೆ ೨ ರೂಪಾಯಿಗಳನ್ನು ಕೊಡಲಾಗುತ್ತದೆ ಎಂದು ಹೇಳಿದ್ದೀರಿ, ಬೆಂಗಳೂರಿನಲ್ಲಿ ೨ ರೂಪಾಯಿಗಳಿಗೆ ಅವರಿಗೆ ಊಟ ಸಿಕ್ಕುತ್ತದೆಯೇ ?

SRI H. M. CHANNABASAPPA.—That is the hon. member's opinion.

SRI D. B. KALMANKAR. —Is it a fact that because the police indulge in corruption and they get sufficient money, the Government has not paid them extra ?

SRI H. M. CHANNABASAPPA.—That supplementary does not arise out of this question.

ಶ್ರೀ ಆಂದಾನಯ್ಯ.—ಈಗತಾನೆ ಮಂತ್ರಿಯವರು ಹೇಳಿದರು ಈ ಇಲಾಖೆಯಲ್ಲಿ ಸಿಬ್ಬಂದಿಯವರು ೨೪ ಗಂಟೆಗಳ ಕಾಲ ಕೆಲಸ ಮಾಡುತ್ತಾರೆ ಎಂದು. ಆದರೆ ಅವರಿಗೆ ಕೊಡತಕ್ಕ ಸಂಬಳ ಬಹಳ ಕಡಿಮೆ. ಆದ್ದರಿಂದ ಸರ್ಕಾರದವರು ಇದನ್ನು ಜಾಸ್ತಿ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ : ಈ ಪ್ರಶ್ನೆ ಇದರಲ್ಲಿ ಉದ ಪವಾಗುವುದಿಲ್ಲ.

ಶ್ರೀ ಕೆ. ಪ್ರಭಾಕರ್ .-(ಎಫ್)ಗೆ ಉತ್ತರವಾಗಿ ಸ್ಪೆಷಲಿ ಅರ್ಡ್ಯಯಸ್ ನೇಚರ್ ಆಫ್ ಡ್ಯೂಟೀಸ್‌ಗೆ ಸ್ಪೆಷಲ್ ಪೇ ಕೊಡುತ್ತಿರುವುದು ಎಂದು ಹೇಳಿದ್ದಾರೆ. ಆದ್ದರಿಂದ ಇಂತಹ ಸ್ಪೆಷಲ್ ಅರ್ಡ್ಯುಯಸ್ ನೇಚರ್ ಆಫ್ ವರ್ಕಿಗೆ ಇಂತಿಷ್ಟು ಸ್ಪೆಷಲ್ ಪೇ ಎಂದು ಏನಾದರೂ ಮಾಡಿದ್ದಿರಾ ; ಮುಂತ್ತು ಸಮಯೋಚಿತವಾಗಿ ಮಾಡುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ .—ಯಾವ್ಯಾವುದರಲ್ಲಿ ಎಷ್ಟೆಷ್ಟು ಮಟ್ಟಿನ ಕಷ್ಟವಿದೆಯೆಂಬುದನ್ನು ಆಯಾ ಕೆಲಸವನ್ನು ನೋಡಿಕೊಂಡು ಮಾಡಬೇಕಾಗುತ್ತದೆಯೇ ಹೊರತು ಇದಕ್ಕೆ ಒಂದು ನಾರ್ಮ್ಸ್ ಮಾಡುವುದಕ್ಕಾಗುವುದಿಲ್ಲ.

ಶ್ರೀ ಕೆ ಆರ್. ಶ್ರೀನಿವಾಸಲು ನಾಯ್ಡು .—ಸರ್ಕಲ್ ಇನ್ ಪೆಕ್ಟರುಗಳಿಗೆ ಮತ್ತು ಸಬ್-ಇನ್ಸ್‌ಪೆಕ್ಟರು ಗಳಿಗೆ ೪೦ ರೂಪಾಯಿ ಮತ್ತು ೧೮ ರೂಪಾಯಿ ಕೊಡುತ್ತಿದ್ದಾರೆಂದು ಉತ್ತರದಲ್ಲಿ ಹೇಳಿದ್ದಾರೆ. ಆದರೆ ರಿಸರ್ವ್ ಪೋಲೀಸ್ ಇನ್ಸ್‌ಪೆಕ್ಟರ್ಸಿಗೆ ಕೊಡುತ್ತಾ ಇಲ್ಲ. ಎರಡು ದರ್ಜೆಯೂ ಒಂದೇ ಗ್ರೇಡಿನಲ್ಲಿರುವುದ ರಿಂದ ತಾರತಮ್ಯ ಏಕೆ ಮಾಡಿದ್ದಾರೆ ?

ಶ್ರೀ ಎಚ್. ಎಂ. ಚನ್ನಬಸಪ್ಪ .—ಅದಕ್ಕೆ ಉತ್ತರ ಅಲ್ಲೇ ಇದೆ. ಅದನ್ನು ತಾವು ಓದಿಕೊಳ್ಳ ಬಹುದು.

RISE IN PRICE OF FOODSTUFFS AND SUGAR

425. SRI K. M. NAGANNA (Chickpet).—

Will the Minister of State for Food and Civil Supplies be pleased to state :—

(*a*) whether it has come to the notice of the Government that prices of foodstuffs including sugar have risen abnormally ;

(*b*) if so, the steps taken by the Government to arrest the same ?

SMT. E. E. VAZ (Minister of State for Food and Civil Supplies) .—

(*a*) No ; the prices have not risen abnormally.

(*b*) Does not arise.

ಶ್ರೀ ಕೆ. ಎಂ. ನಾಗಣ್ಣ .—ಉತ್ತರದಲ್ಲಿ ಬೆಲೆಗಳು ಅತಿಯಾಗಿ ಹೆಚ್ಚಿರುವುದಿಲ್ಲವೆಂದು ಹೇಳಿದ್ದಾರೆ. ಬಹುಶಃ ಮಂತ್ರಿಯಾದ ಮೇಲೆ ಸಾಮಾನ್ಯ ಜನರ ಸಂಪರ್ಕ ಇಟ್ಟುಕೊಳ್ಳದೆ ಈ ರೀತಿ ಬೆಲೆಗಳು ಏರಿರುವುದೂ ಇವರಿಗೆ ಗೊತ್ತಿಲ್ಲವೆಂದು ಕಾಣುತ್ತದೆ. ಆದ್ದರಿಂದ ಇನ್ನಾದರೂ ಸಾಮಾನ್ಯ ಜನರ ಸಂಪರ್ಕ ಇಟ್ಟುಕೊಂಡು ಬೆಲೆಗಳು ಜಾಸ್ತಿಯಾಗುತ್ತದೆಯೆ ಇಲ್ಲವೇ ಎಂದೂ ತಿಳಿದುಕೊಂಡು, ಬೆಲೆಗಳು ಏರಿದರೆ ತಡೆಗಟ್ಟುತ್ತಾರೆಯೇ ?

† ಶ್ರೀಮತಿ ಇ. ಇ. ವಾಜ್ .—ಮಾನ್ಯ ಸದಸ್ಯರು ಹೇಳಿದ ಹಾಗೆ ಸಾಮಾನ್ಯ ಜನರ ಸಂಪರ್ಕ ಇಟ್ಟುಕೊಳ್ಳದೆ ಇಲ್ಲ. ಸಂಪರ್ಕ ಇಟ್ಟು ಕೊಂಡಿದ್ದೇನೆ. ಅದೂ ಅಲ್ಲದೆ ನಾನೂ ಸಹ ಆಹಾರಧಾನ್ಯ ಗಳನ್ನು ಕೊಂಡುಕೊಳ್ಳುತ್ತಿದ್ದೇನೆ. ಮುಂತ್ತು ಮಾನ್ಯ ಸದಸ್ಯರು ಹೇಳಿದಂತಹ ಸಲಹೆಯನ್ನು ಗಮನದಲ್ಲಿಟ್ಟುಕೊಳ್ಳುತ್ತೇನೆ.

ಶ್ರೀ ಕೆ. ಎಂ. ನಾಗಣ್ಣ .—ಹೀಗೆ ಬಡ ಜನರ ಸಂಪರ್ಕ ಇಟ್ಟುಕೊಂಡು ಬೆಲೆಗಳು ಜಾಸ್ತಿಯಾದರೆ ಅದನ್ನು ತಡೆಯುವುದಕ್ಕೆ ಪ್ರಯತ್ನ ಮಾಡುತ್ತಾರೆಯೆ ?

ಶ್ರೀಮತಿ ಇ ಇ. ವಾಜ್ .—ಬೆಲೆಗಳನ್ನು ಯಾವ ತರಹ ಕಡಿಮೆ ಮಾಡಬೇಕೆಂಬುದರ ಬಗ್ಗೆ ಪ್ರಯತ್ನವನ್ನು ಮಾಡುತ್ತೇನೆ.